**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ|| ಯತೀಂದ್ರ ಎಸ್ ರವರು ನಿಯಮ 72 ರಡಿ ಕೋರಿರುವ ಪ್ರಶ್ನೆಗೆ ಉತ್ತರ**

**ವಿಷಯ :** ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕೇಂದ್ರ ಸರ್ಕಾರದ ವತಿಯಿಂದ ರಾಜ್ಯಕ್ಕೆ ಕಡಿಮೆ ಅನುದಾನ ಹಾಗೂ ಸಮಯಕ್ಕೆ ಸರಿಯಾಗಿ ಅನುದಾನ ಒದಗಿಸದೆ ಮಲತಾಯಿ ಧೋರಣೆ ಅನುಸರಿಸುತ್ತಿದ್ದು, ಮುಂದುವರೆದು ಸರಿಯಾದ ಸಮಯಕ್ಕೆ ವೇತನ ಸಿಗದಿರುವ ಕಾರಣ ಜನರು ಬೇರೆ ಕಡೆ ವಲಸೆ ಹೋಗುತ್ತಿದ್ದು, MGNREGA ಯೋಜನೆಯ ಮೂಲಭೂತ ಉದ್ದೇಶವೇ ಈಡೇರದಂತಾಗಿದೆ.

********

**ಉತ್ತರ:** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 2024-25 ನೇ ಸಾಲಿಗೆ ರಾಜ್ಯಕ್ಕೆ 13.00 ಕೋಟಿ ಮಾನವ ದಿನಗಳ ಸೃಜನೆಗೆ ಆಯ-ವ್ಯಯದಲ್ಲಿ ಅನುಮೋದನೆ ನೀಡಿದ್ದು, ಅದರಂತೆ ಪ್ರತಿ ಮಾನವ ದಿನಕ್ಕೆ ರೂ. 349/- ರಂತೆ ರೂ. 4537.00 ಕೋಟಿ ಕೂಲಿ ಅನುದಾನವು ಕೇಂದ್ರ ಸರ್ಕಾರದಿಂದ ಅನುಮೋದನೆಯಾಗಿದೆ.

ಅನುಮೋದನೆಗೊಂಡ ಕೂಲಿ ಅನುದಾನ ರೂ. 4537.00 ಕೋಟಿಗಳಲ್ಲಿ ಮಾನವ ದಿನಗಳ ಸೃಜನೆಯ ಅನುಸಾರ ಕೇಂದ್ರ ಸರ್ಕಾರದಿಂದ ರೂ. 2328.13 ಕೋಟಿಗಳಿಗೆ ಬಿಡುಗಡೆ ಆದೇಶ ಹೊರಡಿಸಿದ್ದು ಸದರಿ ಮೊತ್ತದಲ್ಲಿ ರೂ. 2035.07 ಕೋಟಿಯಷ್ಟು ಕೂಲಿ ಮೊತ್ತ ಬಿಡುಗಡೆಗೊಂಡಿರುತ್ತದೆ, ಉಳಿಕೆ ರೂ. 293.06 ಕೋಟಿಯು ಕೇಂದ್ರದಿಂದ ಬಿಡುಗಡೆಗೆ ಬಾಕಿಯಿರುತ್ತದೆ.

ಪ್ರಸ್ತುತ ಸಾಲಿನಲ್ಲಿ, ಕೇಂದ್ರ ಸರ್ಕಾರದಿಂದ ಕೊನೆಯದಾಗಿ ಕೂಲಿ ಮೊತ್ತ ಬಿಡುಗಡೆಯಾದ ದಿನಾಂಕ: 04.07.2024 ಆಗಿದ್ದು, ದಿನಾಂಕ: 19.07.2024 ರ ಅಂತ್ಯಕ್ಕೆ ಕೂಲಿ ಮೊತ್ತದ ಪಾವತಿಗೆ ರೂ. 451.36 ಕೋಟಿಯು ಬಾಕಿ ಇರುತ್ತದೆ.

| ವರ್ಷ | ಅನುಮೋದಿತ ಮಾನವ ದಿನಗಳು (ಕೋಟಿ ಗಳಲ್ಲಿ) | ಅನುಮೋದಿತ ಕೂಲಿ ಅನುದಾನ (ದಿನಕ್ಕೆ ರೂ.349/- ರಂತೆ) | ಕೂಲಿ ಅನುದಾನಕ್ಕೆ Mother sanction (ಕೋಟಿ ಗಳಲ್ಲಿ) | ಬಿಡುಗಡೆಯಾದ ಕೂಲಿ ಅನುದಾನ (ಕೋಟಿ ಗಳಲ್ಲಿ) | ಬಿಡುಗಡೆಗೆ ಬಾಕಿಯಿರುವ ಕೂಲಿ ಅನುದಾನ (ಕೋಟಿ ಗಳಲ್ಲಿ) | ಪಾವತಿಗೆ ಬಾಕಿಯಿರುವ ಕೂಲಿ ಮೊತ್ತ (ಕೋಟಿ ಗಳಲ್ಲಿ) |
|---|---|---|---|---|---|---|
| 2024-25 | 13.00 | 4537.00 | 2328.13 | 2035.07 | 293.06 | 451.36 |

ಸಾಮಗ್ರಿ ವೆಚ್ಚಕ್ಕೆ ಸಂಬಂಧಿಸಿದಂತೆ, 2024-25ನೇ ಸಾಲಿನ ರಾಜ್ಯ ಸರ್ಕಾರದ ಆಯ-ವ್ಯಯದಲ್ಲಿ 75:25 ರ ಅನುಸಾರ ಕೇಂದ್ರ ಸರ್ಕಾರದಿಂದ ರೂ. 1990.00 ಕೋಟಿ ನಿರೀಕ್ಷಿಸಲಾಗಿದ್ದು, ಇದರಲ್ಲಿ ರೂ. 302.22 ಕೋಟಿ ಬಿಡುಗಡೆಗೊಂಡಿರುತ್ತದೆ. ಸದರಿ ಅನುದಾನದಲ್ಲಿ ರೂ. 148.90 ಕೋಟಿಗೆ ದಿನಾಂಕ 11.07.2024 ರಂದು ಬಿಡುಗಡೆ ಆದೇಶ ನೀಡಿದ್ದು ರಾಜ್ಯದ ಪಾಲಿನ ಮೊತ್ತದೊಂದಿಗೆ ಒಟ್ಟಾರೆ ರೂ. 198.53 ಕೋಟಿಗಳನ್ನು ಬಿಡುಗಡೆಗೊಳಿಸಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

2024-25 ನೇ ಸಾಲಿಗೆ ಸಾಮಗ್ರಿ ವೆಚ್ಚದ ಖಾತೆಯಲ್ಲಿ ಪ್ರಾರಂಭಿಕ ಶಿಲ್ಕು ರೂ. 250.76 ಕೋಟಿ ಅನುದಾನ ಲಭಿವಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನ ರೂ. 204.43 ಕೋಟಿಯು ಒಳಗೊಂಡಂತೆ, ಸಾಮಗ್ರಿ ವೆಚ್ಚಕ್ಕೆ ರೂ. 455.19 ಕೋಟಿಯ ಅನುದಾನ ಲಭ್ಯವಾಗಿರುತ್ತದೆ. ಅದರಲ್ಲಿ ರೂ. 446.85 ಕೋಟಿ

ವೆಚ್ಚವನ್ನು ಭರಿಸಲಾಗಿದೆ. ನರೇಗಾ ಯೋಜನೆಯ MIS ವರದಿಯಾನುಸಾರ ರೂ. 781.77 ಕೋಟಿ ಮೊತ್ತದ ಸಾಮಗ್ರಿ ಬಿಲ್ ಪಾವತಿಗೆ ಬಾಕಿಯಿರುತ್ತದೆ.

ರೂ. ಕೋಟಿಗಳಲ್ಲಿ

| ವರ್ಷ | ಪ್ರಾ. ಶಿಲ್ಕು | ಆಯವ್ಯಯದಲ್ಲಿ ಒದಗಿಸಿರುವ ಅನುದಾನ | | ಈವರೆಗೆ ಮಂಜೂರಾಗಿರುವ ಅನುದಾನ | | ಬಿಡುಗಡೆಗೊಂಡ ಸಾಮಗ್ರಿ ಅನುದಾನ | | ಒಟ್ಟು ಲಭ್ಯವಾದ ಅನುದಾನ (ಪ್ರಾ. ಶಿಲ್ಕನ್ನು ಒಳಗೊಂಡಂತೆ) | ವೆಚ್ಚ |
|---|---|---|---|---|---|---|---|---|---|
| | | ಕೇಂದ್ರದ ಪಾಲು | ರಾಜ್ಯದ ಪಾಲು | ಕೇಂದ್ರದ ಪಾಲು | ರಾಜ್ಯದ ಪಾಲು | ಕೇಂದ್ರದ ಪಾಲು | ರಾಜ್ಯದ ಪಾಲು | | |
| 2024-25 | 250.76 | 1990.00 | 400.00 | 302.22 | 100.74 | 153.32 | 51.11 | 455.19 | 446.85 |

**ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಉದ್ದೇಶಗಳು ಮತ್ತು ಅದಕ್ಕನುಸಾರವಾಗಿ ಸಾಧಿಸಿರುವ ಪ್ರಗತಿ ಕುರಿತು:**

**ಉದ್ದೇಶಗಳು:**

1. ಗ್ರಾಮೀಣ ಪ್ರದೇಶಗಳಲ್ಲಿ ಬೇಡಿಕೆಗೆ ಅನುಗುಣವಾಗಿ ಪ್ರತಿ ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ ಕನಿಷ್ಠ 100 ದಿನಗಳ ಕೆಲಸವನ್ನು ಒದಗಿಸುವ ಮೂಲಕ ದೀರ್ಘಕಾಲ ಬಾಳಿಕೆ ಬರುವ ಸಮುದಾಯ ಆಸ್ತಿಗಳ ನಿರ್ಮಾಣ.
2. ಯೋಜನೆಯಡಿ ಅರ್ಹ ಕುಟುಂಬಗಳ ಜೀವನೋಪಾಯ ಮತ್ತು ಸುಸ್ಥಿರ ಅಭಿವೃದ್ಧಿಗೆ ವೈಯಕ್ತಿಕ ಸೌಲಭ್ಯಗಳನ್ನು ಒದಗಿಸುವುದು.
3. ಪಂಚಾಯತ್ ರಾಜ್ ಸಂಸ್ಥೆಗಳನ್ನು ಬಲಪಡಿಸುವುದು.

**24-25 ನೇ ಸಾಲಿನ ಪ್ರಗತಿ:**

ಪ್ರಸ್ತುತ ಸಾಲಿನ ಇಲ್ಲಿಯವರೆಗೆ, 20.91 ಲಕ್ಷ ಕುಟುಂಬಗಳು ಯೋಜನೆಯಡಿ ಭಾಗವಹಿಸಿದ್ದು, ಒಟ್ಟು 36.59 ಲಕ್ಷ ಜನರು ಯೋಜನೆಯಡಿ ಉದ್ಯೋಗ ಪಡೆದಿದ್ದು, ಶೇ.54.11 ಮಹಿಳೆಯರು ಯೋಜನೆಯ ಸೌಲಭ್ಯವನ್ನು ಪಡೆದಿರುತ್ತಾರೆ.

ದಿನಾಂಕ: 20-07-2024 ಕ್ಕೆ 624.87 ಲಕ್ಷ ಮಾನವ ದಿನಗಳ ಉದ್ಯೋಗವನ್ನು ಯೋಜನೆಯಡಿ ಒದಗಿಸಲಾಗಿದೆ. ಪ್ರತಿ ಸಕ್ರಿಯ ಕುಟುಂಬವು ಸರಾಸರಿ 29.00 ಮಾನವ ದಿನಗಳ ಉದ್ಯೋಗವನ್ನು ಪಡೆದಿರುತ್ತದೆ. 3740 ಕುಟುಂಬಗಳು 100 ದಿನಗಳ ಉದ್ಯೋಗ ಪೂರೈಸಿದ್ದು, 1.33 ಲಕ್ಷ ಕುಟುಂಬಗಳು 70 ರಿಂದ 99 ಮಾನವ ದಿನಗಳ ಉದ್ಯೋಗವನ್ನು ಪೂರೈಸಿವೆ.

ಪ್ರಸ್ತುತ ಸಾಲಿನಲ್ಲಿ 11.14 ಲಕ್ಷ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ (ಮುಂದುವರೆದ ಕಾಮಗಾರಿಗಳನ್ನು ಸೇರಿಸಿಕೊಂಡು), ಇದರಲ್ಲಿ 5.9 ಲಕ್ಷ ವೈಯಕ್ತಿಕ ಕಾಮಗಾರಿಗಳಾಗಿವೆ. ಶೇ. 53.69 ರಷ್ಟು ವೈಯಕ್ತಿಕ ಕಾಮಗಾರಿಗಳನ್ನು ಕೈಗೊಂಡಿದ್ದು, ಇದರಿಂದ ಗ್ರಾಮೀಣ ಕುಟುಂಬಗಳ ಜೀವನೋಪಾಯಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಪ್ರಸ್ತುತ ಸಾಲಿನಲ್ಲಿ 3.07 ಲಕ್ಷ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. **ಜಿಲ್ಲಾವಾರು ಪ್ರಗತಿಯ ವರದಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.**

**ಗುಳೆ ಹೋಗುವುದನ್ನು ತಡೆಯಲು ಅನುಸರಿಸಲಾಗುತ್ತಿರುವ ಕ್ರಮ :**

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಕೆಲಸಕ್ಕಾಗಿ ನೋಂದಾಯಿಸಿಕೊಂಡು ಸಕ್ರಿಯವಾಗಿ ಕೆಲಸ ಪಡೆಯದೆ ಇರುವ ಕುಟುಂಬಗಳನ್ನು ಸಕ್ರಿಯಗೊಳಿಸಲು ಹಾಗೂ ಗುಳೆ ಹೋಗುವುದನ್ನು ತಪ್ಪಿಸಲು, ಪ್ರಸಕ್ತ ಸಾಲಿನ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ **ವಲಸೆ ಯಾಕ್ರಿ ನಿಮ್ಮೂರಲ್ಲೆ ಉದ್ಯೋಗ ಖಾತ್ರಿ** ಎಂಬ ಅಭಿಯಾನವನ್ನು ಕೈಗೊಳ್ಳಲಾಗಿದೆ. ಅಭಿಯಾನದಡಿ ಮನೆ ಮನೆ ಭೇಟಿ ನೀಡಿ ಸಕ್ರಿಯವಲ್ಲದ ಕುಟುಂಬಗಳಿಗೆ ಅಕುಶಲ ಕೆಲಸ ಮತ್ತು ವೈಯಕ್ತಿಕ ಕಾಮಗಾರಿಗಳ ಬಗ್ಗೆ ಜಾಗೃತಿ ಮೂಡಿಸಿ ಆ ಕುಟುಂಬಗಳಿಂದ ಸಕ್ರಿಯಗೊಳಿಸಲು ಕ್ರಮವಹಿಸಲಾಗುತ್ತಿದೆ.

**ಸಂಖ್ಯೆ: ಗ್ರಾಅಪ/373(1)/ಉಖಾಯೋ/2024**

**(ಪ್ರಿಯಾಂಕ್ ಖರ್ಗೆ)**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ
ತಂತ್ರಜ್ಞಾನ ಸಚಿವರು.

# ಅನುಬಂಧ

## 2024-25 ನೇ ಸಾಲಿನ ಭೌತಿಕ ಪ್ರಗತಿ 20-07-2024 ರಂತೆ

| ಕ್ರ. ಸಂ | ಜಿಲ್ಲೆ | ವಾರ್ಷಿಕ ಗುರಿ (ಲಕ್ಷಗಳಲ್ಲಿ) | ಸಂಚಿತ ಗುರಿ 20.07.2024 ಕ್ಕೆ (ಲಕ್ಷಗಳಲ್ಲಿ) | ಮಾನವ ದಿನಗಳ ಸೃಜನೆ 20-07-2024 ಕ್ಕೆ (ಲಕ್ಷಗಳಲ್ಲಿ) | ಸಂಚಿತ ಗುರಿಗೆ ಶೇಕಡ ವಾರು ಪ್ರಗತಿ | ವಾರ್ಷಿಕ ಗುರಿಗೆ ಶೇಕಡವಾರು ಪ್ರಗತಿ | ಉದ್ಯೋಗ ಪಡೆದಿರುವ ಜನರ ಸಂಖ್ಯೆ (ಲಕ್ಷಗಳಲ್ಲಿ) | ಉದ್ಯೋಗ ಪಡೆದಿರುವ ಮಹಿಳೆಯರ ಸಂಖ್ಯೆ (ಲಕ್ಷಗಳಲ್ಲಿ) | 100 ದಿನಗಳ ಕೆಲಸ ಪೂರೈಸಿರುವ ಕುಟುಂಬಗಳ ಸಂಖ್ಯೆ | 71 ರಿಂದ 99 ದಿನಗಳ ಕೆಲಸ ಪೂರೈಸಿರುವ ಕುಟುಂಬಗಳ ಸಂಖ್ಯೆ | 2024-25 ರಲ್ಲಿ ಕೈಗೆತ್ತಿಕೊಳ್ಳಲಾದ ಕಾಮಗಾರಿಗಳ ಸಂಖ್ಯೆ | ಕಳೆದ 03 ತಿಂಗಳಿನಲ್ಲಿ ಪೂರ್ಣಗೊಳಿಸಿದ ಕಾಮಗಾರಿಗಳ ಸಂಖ್ಯೆ |
|---|---|---|---|---|---|---|---|---|---|---|---|---|
| 1 | ಬಾಗಲಕೋಟೆ | 50 | 21.34 | 18.06 | 84.63 | 36.12 | 1.26 | 0.68 | 47 | 2094 | 33225 | 6871 |
| 2 | ಬಳ್ಳಾರಿ | 60 | 45.96 | 53.08 | 115.51 | 88.47 | 2.39 | 1.25 | 516 | 22337 | 18672 | 2446 |
| 3 | ಬೆಳಗಾವಿ | 130 | 56.29 | 55.66 | 98.87 | 42.81 | 2.80 | 1.63 | 446 | 10266 | 86212 | 22365 |
| 4 | ಬೆಂಗಳೂರು ನಗರ | 1 | 0.28 | 0.19 | 67.70 | 19.19 | 0.01 | 0.01 | 2 | 16 | 2591 | 438 |
| 5 | ಬೆಂಗಳೂರು ಗ್ರಾಮಾಂತರ | 14 | 5.31 | 6.53 | 122.87 | 46.63 | 0.33 | 0.17 | 48 | 1737 | 12210 | 3005 |
| 6 | ಬೀದರ್ | 50 | 24.08 | 32.38 | 134.47 | 64.76 | 1.52 | 0.82 | 86 | 7856 | 69627 | 14312 |
| 7 | ಚಾಮರಾಜ ನಗರ | 25 | 9.93 | 10.79 | 108.70 | 43.17 | 0.66 | 0.38 | 24 | 1710 | 33789 | 7944 |
| 8 | ಚಿಕ್ಕಬಳ್ಳಾಪುರ | 30 | 11.83 | 7.80 | 65.96 | 26.01 | 0.54 | 0.28 | 23 | 1096 | 33648 | 5598 |
| 9 | ಚಿಕ್ಕಮಗಳೂರು | 30 | 8.53 | 11.61 | 136.17 | 38.70 | 0.62 | 0.33 | 80 | 3442 | 29490 | 8619 |
| 10 | ಚಿತ್ | 51 | 19.50 | 22.07 | 113.15 | 43.27 | 1.31 | 0.71 | 47 | 3807 | 46735 | 16015 |
| 11 | ದಕ್ಷಿಣ ಕನ್ನಡ | 15 | 5.46 | 4.30 | 78.73 | 28.65 | 0.22 | 0.11 | 61 | 1136 | 18411 | 6009 |
| 12 | ದಾವಣಗೆರೆ | 35 | 11.23 | 12.70 | 113.09 | 36.28 | 0.76 | 0.40 | 95 | 2714 | 23868 | 8430 |
| 13 | ಧಾರವಾಡ | 25 | 10.69 | 9.21 | 86.16 | 36.85 | 0.60 | 0.28 | 19 | 1699 | 42930 | 7923 |
| 14 | ಗದಗ | 35 | 18.86 | 23.82 | 126.28 | 68.06 | 1.79 | 0.86 | 49 | 3707 | 25926 | 10147 |
| 15 | ಹಾಸನ | 44 | 16.98 | 15.05 | 88.66 | 34.20 | 1.00 | 0.51 | 46 | 2458 | 39806 | 10933 |
| 16 | ಹಾವೇರಿ | 46 | 18.92 | 23.08 | 121.98 | 50.18 | 1.25 | 0.60 | 194 | 7146 | 42031 | 14472 |
| 17 | ಕಲಬುರಗಿ | 62 | 34.38 | 29.04 | 84.47 | 46.85 | 2.24 | 1.22 | 33 | 2883 | 53415 | 10824 |
| 18 | ಕೊಡಗು | 5 | 2.10 | 2.03 | 96.90 | 40.69 | 0.11 | 0.06 | 6 | 439 | 6729 | 2616 |
| 19 | ಕೋಲಾರ | 40 | 15.05 | 15.05 | 100.03 | 37.62 | 0.73 | 0.39 | 85 | 3967 | 37805 | 8344 |
| 20 | ಕೊಪ್ಪಳ | 82 | 44.21 | 51.91 | 117.41 | 63.31 | 3.54 | 1.83 | 134 | 7527 | 37662 | 10454 |
| 21 | ಮಂಡ್ಯ | 27 | 8.10 | 7.39 | 91.30 | 27.38 | 0.54 | 0.32 | 17 | 532 | 39381 | 7770 |
| 22 | ಮೈಸೂರು | 24 | 8.37 | 9.18 | 109.68 | 38.23 | 0.58 | 0.30 | 89 | 1854 | 46711 | 12526 |
| 23 | ರಾಯಚೂರು | 110 | 61.73 | 74.14 | 120.09 | 67.40 | 4.24 | 2.20 | 190 | 15511 | 53487 | 13291 |
| 24 | ರಾಮನಗರ | 42 | 14.53 | 13.14 | 90.46 | 31.28 | 0.69 | 0.36 | 47 | 2907 | 54438 | 17889 |
| 25 | ಶಿವಮೊಗ್ಗ | 29 | 13.94 | 13.47 | 96.60 | 46.44 | 0.98 | 0.53 | 64 | 1902 | 25319 | 5484 |
| 26 | ತುಮಕೂರು | 50 | 14.98 | 15.68 | 104.69 | 31.36 | 1.03 | 0.53 | 59 | 2412 | 82273 | 27545 |
| 27 | ಉಡುಪಿ | 8 | 3.95 | 3.98 | 100.75 | 49.73 | 0.21 | 0.13 | 106 | 881 | 20834 | 3573 |
| 28 | ಉತ್ತರಕನ್ನಡ | 17 | 7.42 | 7.72 | 104.01 | 45.40 | 0.50 | 0.26 | 17 | 1589 | 31534 | 4771 |
| 29 | ವಿಜಯನಗರ | 73 | 43.10 | 43.69 | 101.36 | 59.85 | 2.12 | 1.08 | 951 | 13792 | 29723 | 12888 |
| 30 | ವಿಜಯಪುರ | 42 | 17.00 | 16.25 | 95.60 | 38.70 | 0.94 | 0.50 | 105 | 2631 | 44335 | 7162 |
| 31 | ಯಾದಗಿರಿ | 48 | 16.65 | 15.83 | 95.09 | 32.99 | 1.10 | 0.59 | 21 | 1443 | 40541 | 16347 |